## ತಲೆ: ಒಂದು

ಗ್ರೀಷ್ಮದ ಇರುಳು ವ್ಯಗ್ರವಾಗಿತ್ತು. ಹಗಲೆಲ್ಲ ಕೆಂಡದಂತಹ ಬಿಸಿಲು ತುಂಡು ಭೂಮಿಯನ್ನು ಧುಮುಗುಟ್ಟುವಂತೆ ಮಾಡಿದ್ದರಿಂದ ಧಗೆ ತಡೆಯಲಾಗುತ್ತಿರಲಿಲ್ಲ. ಸೆಕೆಯಿಂದ ಮೈಯೆಲ್ಲಾ ಬೆವರೊಡೆಯುತ್ತಿತ್ತು. ನನಗೆ ಒಂದೆರಡು ಗಂಟೆಗಳ ಕಾಲವಾದರೂ ಫ್ಯಾನಿನಡಿಯಲ್ಲಿ ಹಾಯಾಗಿ ಕುಳಿತು ಗಾಳಿ ಕುಡಿಯಬೇಕೆನಿಸಿತು. ಅಷ್ಟರಲ್ಲಿ ಕರೆಂಟ್ ಕೈಕೊಟ್ಟಿತು. ಎಮರ್ಜೆನ್ಸಿ ಲೈಟ್ ಬೆಳಕು ಮಂದವಾಗಿತ್ತು. ಹೊರಗೆ ಕತ್ತಲು `ಗವ್' ಎನ್ನುತ್ತಿತ್ತು. ಯಾಕೋ ಮನಸ್ಸು ಬೇಡ ಬೇಡವೆಂದರೂ ಗತಕಾಲದ ನೆನಪುಗಳಲ್ಲೇ ಹೂತು ಹೋಗುತ್ತಿತ್ತು. ನನಗೆ ಕನಸುಗಳು ಬೇರೆಯೇ ಇತ್ತು. ಆದರೆ ಯಾವುದೋ ಸಂದರ್ಭ – ಸನ್ನಿವೇಶಗಳು ನನ್ನನ್ನು ಕಟ್ಟಿಹಾಕಿತ್ತು. ಒತ್ತಡಗಳ ನಡುವೆಯೂ ಓದುತ್ತಾ ನನ್ನದಲ್ಲದ ಅಪೇಕ್ಷೆಗಳಿಗೆ ಒಪ್ಪಿಕೊಂಡು ಬಿಟ್ಟಿದ್ದೆ. ನನಗಾಗದ ನೌಕರಿಯನ್ನೇ ಯಾಕೆ ಇಷ್ಟಪಟ್ಟೆನೆಂಬುದಕ್ಕೆ ಉತ್ತರವೇ ಸಿಗುತ್ತಿರಲಿಲ್ಲ.



ಪೋರ್ಟಿಕೋದ ಆಚೆ ಬದಿಯಲ್ಲಿ ವಾಹನವೊಂದು ನಿಂತಿರುವುದು ಅದರ ಹೆಡ್‌ಲೈಟ್‌ನಿಂದ ಅಸ್ಪಷ್ಟವಾಗಿ ಕಾಣುತ್ತಿತ್ತು. ಮನೆಯ ಎಮರ್ಜೆನ್ಸಿ ಲೈಟಿನ ಬೆಳಕು ಅಂಗಳದ ಉದ್ದಕ್ಕೂ ಮಂದವಾಗಿ ಚೆಲ್ಲಿತ್ತು. ಉದ್ದನೆಯ ಕಬ್ಬಿಣದ ಗೇಟಿನ ಎಡ ಬದಿಯಿಂದ ಆಕೃತಿಯೊಂದು ನಡೆದು ಬಂದಿತು. ಅಂಗಳದ ಎಡ–ಬಲಕ್ಕಿದ್ದ ತೆಂಗಿನ ಮರಗಳ ನೆರಳಿನಲ್ಲಿ ಆಕೃತಿ ಸರಿಯುತ್ತಾ ನನ್ನ ಬಳಿ ಬಂದಿತು. ಅಳುಕಿತು, ಮೆಲ್ಲಗೆ ಕೆಮ್ಮಿತು. ನಾನು 'ಯಾರು... ಯಾರದು...?' ಎಂದೆ, ಅವ್ಯಕ್ತ ಭಯದಿಂದ.

ನನ್ನ ಪ್ರಶ್ನೆಗೆ ಉತ್ತರವಾಗಿ, 'ನಾನೋ ಪ್ರೊಫೆಸರ್!' ಎಂಬ ಶಬ್ದ ಬಂದಿತು. ನಂತರ ತಲೆಗೆ ಹಾಕಿಕೊಂಡಿದ್ದ ಮಂಕಿ ಕ್ಯಾಪನ್ನು ತೆಗೆದು ಸಶಬ್ದವಾಗಿ ನಕ್ಕರು.

'ಸರ್, ನೀವಾ...? ಬನ್ನಿ ಸರ್... ಇದೇನಿದು ಈ ಸೆಕೆಯಲ್ಲೂ ಮಂಕಿಕ್ಯಾಪ್?'

'ಅಯ್ಯೋ... ಶೀತ, ತಲೆನೋವು ಕಣೋ...' ಎನ್ನುತ್ತಾ 'ಹುಸ್ಸಪ್ಪಾ' ಎಂದು ಸೋಫಾದಲ್ಲಿ ಕುಸಿದು ಕುಳಿತರು. ನಾನೆಂದೆ:

'ನಿಮಗೆ ನೂರು ವರುಷ ಆಯುಷ್ಯ ಸರ್...'

'ಯಾಕಪ್ಪಾ? ನರಕದಲ್ಲಿ ಬಿದ್ದು ಸಾಯೋಕಾ ನೂರು ವರ್ಷಗಳು...?'

'ಹಾಗಲ್ಲ ಸರ್, ನಾನು ಈಗ ತಾನೆ ನಿಮಗೆ ಫೋನ್ ಮಾಡ್ಬೇಕೆಂದಿದ್ದೆ... ಅಷ್ಟರಲ್ಲಿ ನೀವೇ ಬಂದ್ರಿ...'

'ಆಂ... ಏನ್ಸಮಚಾರ?'

'ನಿಮ್ಜೊತೆ ಡಿಸ್ಕಸ್ ಮಾಡೋ ವಿಚಾರವೊಂದಿದೆ... ಅಂದ ಹಾಗೆ ಕುಡೀತೀರಾ?'

'ಟೀ...ಕಾಫಿ ಬಿಲ್ಕುಲ್ ಬೇಡಪ್ಪಾ..'

'ಸರ್, ನಿಮಗಾಗಿಯೇ ಒಳ್ಳೆಯ ವಿಸ್ಕಿ ತಂದಿಟ್ಟಿದ್ದೀನಿ..'

'ಐಸ್ ಇದೆಯಾ?'

'ಏನ್ಸಾರ್, ಶೀತ– ತಲೆನೋವು ಅಂತೀರಿ... ಐಸ್ ಬೇರೆ ಕೇಳ್ತೀರಾ? ಅಬ್ಬಬ್ಬ... ಘಾಟಿ ಮನುಷ್ಯರಪ್ಪ...'

ನಾನು ಅಷ್ಟು ಹೇಳಿ ಎರಡು ಗ್ಲಾಸ್ ಮತ್ತು ವಿಸ್ಕಿ ಬಾಟ್ಲಿ, ಸೋಡಾ ತಂದು ಟೇಬಲ್ ಮೇಲಿಟ್ಟೆ. ಐಸ್‌ಕ್ಯೂಬ್‌ನಲ್ಲಿ ಏಳೆಂಟು ಐಸ್ ತುಂಡುಗಳನ್ನೂ ತಂದಿಟ್ಟೆ. ಎರಡು ಗ್ಲಾಸ್‌ಗಳಿಗೂ ಪ್ರೊಫೆಸರ್ ಅವರೇ ವಿಸ್ಕಿಯನ್ನು ಬಗ್ಗಿಸಿದರು. ಐಸ್ ತುಂಡುಗಳನ್ನು ಹಾಕಿದರು. ಸೋಡಾ ಬೆರೆಸಿ, ಒಂದನ್ನು ನನಗೆ ತೋರಿಸಿ, ಇನ್ನೊಂದನ್ನು ಎತ್ತಿ ತೋರಿಸಿ, ತುಟಿಗಳಿಗಿಟ್ಟುಕೊಂಡರು. 'ಚಿಯರ್ಸ್'ನ ಮೂಲಕ ವಿಸ್ಕಿ ಹೀರಿದೆವು. ಕುಡಿಯುತ್ತಾ ಬಾಗಿ ಅವರ ಮುಖಭಾವವನ್ನು ಗಮನಿಸಿದೆ. ತುಟಿಗಳಲ್ಲಿ ನಿಷ್ಕಾರಣ ನಗುವಿತ್ತು. ನಗಣ್ಯವೋ ಎಂಬಷ್ಟು ಧಿಮಾಕು ಇತ್ತು. ಅವರು ಕುಡಿಯುತ್ತಲೇ ಇದ್ದರು.

–ನಾನು ಅಪರೂಪಕ್ಕೆ ಕುಡಿಯುತ್ತಿದ್ದೆ– ನೈಂಟಿ.

ಇನ್ನಷ್ಟು ಹೊತ್ತೇರಿತು. ಪ್ರೊಫೆಸರ್ ಕಣ್ಣುಗಳು ರಂಗೇರಿದ್ದವು–, ಕೆಂಡವಾಗಿದ್ದವು. ಎಮರ್ಜೆನ್ಸಿ ಲೈಟಿನ ಬೆಳಕು ಮಂದವಾಗಿ ಆರಿ ಹೋಗುತ್ತದೆ ಎನ್ನುವಷ್ಟರಲ್ಲಿ ಕರೆಂಟ್ ಬಂತು. ಅನಿವಾರ್ಯವಾಗಿ ಬೆಳಕು ಬೇಕಿತ್ತು. ರಭಸವಾಗಿ ತಿರುಗುವ ಫ್ಯಾನಿನಂತೆ ಇಬ್ಬರ ತಲೆಗಳೂ ತಿರುಗಹತ್ತಿದವು. ನಾನೆಂದೆ:

'ಸರ್, ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ ಬಳಿಕ, ನಿಮ್ಮ ಇಚ್ಛೆಯಂತೆ 'ಸೋಷಿಯಲ್ ವರ್ಕ್' ಎಂಬ ವಿಷಯದಲ್ಲಿ ಡಿಪ್ಲೊಮಾ ಮುಗಿಸಿದೆ. ಮುಂದೆ ಏನಾದರೂ ನಾನು ಮಾಡಬೇಕಲ್ಲಾ...?'

'ನೋಡಯ್ಯ, ನೀನು ಕಲಿಯುವುದರಲ್ಲಿ ಜಾಣರ ಜಾಣ. ನಾನು ಹೇಳಿದ ಹಾಗೆ ಇಷ್ಟೊಂದು ಫಾಸ್ಟ್ ಆಗಿದ್ದೀಯಲ್ಲಾ... ನೀನು ಪಿಎಚ್ಡಿ ಮಾಡಿಬಿಡು!'

'ಸರ್!'

'ಸರ್ ಗಿರ್ ಏನೂ ಇಲ್ಲ. ನೀನು ಪಿಎಚ್ಡಿ ಮಾಡಲೇಬೇಕೆಂಬುದು ನನ್ನ ತೀರ್ಮಾನ. ಹಾಗಿರುವಾಗ ನಿನಗ್ಯಾಕೆ ಭಯ?'

'ಪಿಎಚ್ಡಿ ಮಾಡಬೇಕಾದ್ರೆ ಅದಕ್ಕೊಂದು ಗಹನವಾದ ವಿಷಯ ನನಗೆ ಏನೆಂದು ಸ್ಪಷ್ಟವಾಗುತ್ತಿಲ್ಲ ಸರ್...'

'ಮೈ ಡಿಯರ್ ಯಂಗ್ ಬಾಯ್, ಯೂ ಆರ್ ಎ ಡ್ಯಾಶಿಂಗ್ ಪರ್ಸನ್. ಯಾರಿಂದಲೂ ಊಹಿಸಲಸಾಧ್ಯವಾದ ಒಂದು ಮಹತ್ವದ ವಿಷಯವನ್ನು ಸೂಚಿಸುತ್ತೇನೆ. ಆಗುತ್ತಾ?'

'ಸರ್, ಬದುಕಿಗೆ ನಿಜವಾಗಿ ಯಾವ ಅರ್ಥವಿದೆ ಎಂದು ನನಗೆ ನೀವು ಪ್ರೊಫೆಸರ್ ಆಗಿ ಸಿಗುವವರೆಗೂ ತಿಳಿದಿರಲಿಲ್ಲ. ನೀವು ಯಾವ ಅರ್ಥವನ್ನೂ ಹುಡುಕುವವರಲ್ಲ ಹಾಗೂ ತಲೆಕೆಡಿಸಿಕೊಳ್ಳುವವರಲ್ಲ. ಅಂದ ಹಾಗೆ ಯಾವುದದು ಮಹತ್ವದ ವಿಷಯ?'

'ಅದು ಮನುಷ್ಯ ಸಂಬಂಧಗಳಿಗೆ ಸಂಬಂಧಿಸಿದ ವಿಷಯ. ನಿನಗೆ ಅಚ್ಚರಿಯಾಗಬಹುದು. ನಿನ್ನ ಮನೋಧರ್ಮಕ್ಕೆ, ನಿನ್ನ ವ್ಯಕ್ತಿತ್ವಕ್ಕೆ ಖಂಡಿತ ಹೊಂದುತ್ತದೆ. ನಿನಗೆ ಒಂದು ಛಾಲೆಂಜಿಂಗ್ ವಿಷಯವಾಗುತ್ತದೆ– ಅದೇ ಸವಾಲಿನ ಕೆಲಸ!'

'ನೀವು ಹೇಳಿದ ಮೇಲೆ ಮುಗಿಯಿತು ಸರ್. ಅಂತೂ ನಿಮ್ಮ ಮಾರ್ಗದರ್ಶನವಿದ್ದರೆ ನನಗೆ ಸವಾಲಿನ ಕೆಲಸವಾಗಲಾರದು. ಅಲ್ವೇ?'

'ನಿನಗೆ ತುಂಬಾ ಪ್ರಿಯವಾದ ವಿಷಯ ಮಾನವೀಯ ಸಂಬಂಧಗಳು. ಮನುಷ್ಯ– ಮನುಷ್ಯರ ನಡುವಿನ ಸೂಕ್ಷ್ಮ ಸಂಬಂಧಗಳನ್ನು ಮನೋವಿಶ್ಲೇಷಣೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ನಿನಗೆ ಪಂಚಪ್ರಾಣವಾಗಿರುವುದರಿಂದ ನನಗೆ ಪಕ್ಕನೆ ಹೊಳೆದ ವಿಷಯವಿದು...'